**ಸಾಕ್ಷಿಯನ್ನು ದಿಃ19.11.2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ಶ್ರೀ ಎ.ಎಂ.ಆರ್ ವಕೀಲರಿಂದಃ**

ದಾವಾ ಅನುಸೂಚಿ 1 ಕ್ಕೆ ಸಂಬಂಧಪಟ್ಟಂತೆ ನನ್ನ ತಂದೆಯವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ಖರೀದಿ ಕಾಗದ ಪತ್ರದ ದಿಃ16.12.1948 ರ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು. ಸದರಿ ದಾಖಲೆಯ ಅಸಲು ಪ್ರತಿ ಎಲ್ಲಿಯೋ ಕಳೆದು ಹೋಗಿರುತ್ತದೆ. ದಾವಾ ಅನುಸೂಚಿ 2 ಕ್ಕೆ ಸಂಬಂಧಪಟ್ಟಂತೆ ನನ್ನ ತಂದೆಯವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ಖರೀದಿ ಕಾಗದ ಪತ್ರದ ದಿಃ21.10.1960 ರ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ದಾವಾ ಅನುಸೂಚಿ 3 ಕ್ಕೆ ಸಂಬಂಧಪಟ್ಟಂತೆ ನನ್ನ ತಂದೆಯವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ಖರೀದಿ ಕಾಗದ ಪತ್ರದ ದಿಃ05.08.1966 ರ ಅಸಲು

ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಿಸ್ಸಾ ಪೋಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಸರ್ವೇ ಸ್ಕೆಚ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2 ಇಸಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-7 ಮತ್ತು 8 ಎಂದು, ಸರ್ವೇನಂಬರ್ 51/ಎಗೆ ಸಂಬಂಧಪಟ್ಟಂತೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಸರ್ವೇನಂಬರ್ 51ಕ್ಕೆ ಸಂಬಂಧಪಟ್ಟಂತೆ ಒಂದು ಪಹಣಿಯ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಸರ್ವೇನಂಬರ್ 51/3ಕ್ಕೆ ಸಂಬಂಧಪಟ್ಟಂತೆ ಒಂದು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ಸರ್ವೇನಂಬರ್ 51/1ಕ್ಕೆ ಸಂಬಂಧಪಟ್ಟಂತೆ 2 ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-12 ಮತ್ತು 13 ಎಂದು, ಸರ್ವೇನಂಬರ್ 51ಕ್ಕೆ ಸಂಬಂಧಪಟ್ಟಂತೆ 3 ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-14 ರಿಂದ 16 ಎಂದು, ಸರ್ವೇನಂಬರ್ 51ಕ್ಕೆ ಸಂಬಂಧಪಟ್ಟಂತೆ 2 ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-17 ಮತ್ತು 18 ಎಂದು ಗುರ್ತಿಸಲಾಯಿತು. ಸದರಿ ನಿಪಿ-18 ಮೂರು ಪುಟಗಳನ್ನೊಳಗೊಂಡಿರುತ್ತದೆ. ಸರ್ವೇನಂಬರ್ 51/2ಕ್ಕೆ ಸಂಬಂಧಪಟ್ಟಂತೆ ಒಂದು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು, 1 ರಿಂದ 4ನೇ ಪ್ರತಿವಾದಿಯರಿಗೆ ನೋಟೀಸ್ಸನ್ನು ಕೊಟ್ಟ ಬಗ್ಗೆ ನೋಟೀಸ್ಸಿನ ಕಛೇರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-20 ಎಂದು, ಅದಕ್ಕೆ ಸಂಬಂಧಪಟ್ಟಂತೆ 4 ಅಂಚೆ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-21 ರಿಂದ 24ಎಂದು, ಸದರಿ ನೋಟೀಸ್ಸು ಪ್ರತಿವಾದಿಗಳಿಗೆ ತಲುಪಿದ ಬಗ್ಗೆ 4 ಅಂಚೆ ಸ್ವೀಕೃತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-25 ರಿಂದ 28 ಎಂದು ಗುರ್ತಿಸಲಾಯಿತು. 5 ರಿಂದ 8ನೇ ಪ್ರತಿವಾದಿಯರಿಗೆ ಕೊಟ್ಟ ನೋಟೀಸ್ಸಿನ ಕಛೇರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-29 ಎಂದು, ಅದಕ್ಕೆ ಸಂಬಂಧಪಟ್ಟಂತೆ 3 ಅಂಚೆ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-30 ರಿಂದ 32 ಎಂದು, ಸದರಿ ನೋಟೀಸ್ಸು 5 ರಿಂದ 8ನೇ ಪ್ರತಿವಾದಿಯರಿಗೆ ತಲುಪಿದ ಬಗ್ಗೆ 3 ಅಂಚೆ ಸ್ವೀಕೃತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-33 ರಿಂದ 35 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಎ.ಸಿ. ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**